ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

ಸಿ.ಸಿ. ನಂ. **1379/2024** ಸಿ. ಡಬ್ಲ್ಯೂ: **3** ಪಿ ಡಬ್ಲ್ಯೂ ಃ **5**

ಸಾಕ್ಷಿಯ ಹೆಸರು ಃ ಪ್ರಕಾಶ ಮೋತೆ

ತಂದೆಯ ಹೆಸರು ಃ ಯಲ್ಲಪ್ಪ.

ವಯಸ್ಸು ಃ 39 ವರ್ಷ

ಉದ್ಯೋಗ ಃ ಚಾಲಕ.

ವಾಸಸ್ಥಳ ಃ ಮಾದಾಪೂರ, ತಾಲೂಕಃ ಸವಣೂರ.

ದಿನಾಂಕಃ 15/04/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದ

1. ಸಾಕ್ಷಿ ಮಹಜರನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 2 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ತಡಸ ಕ್ರಾಸನಲ್ಲಿ ಮಾಡಿದ್ದು, ದಿನಾಂಕ ನೆನಪಿಲ್ಲ. ನಿಪಿ. 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ಓದಿ ಹೇಳಿಲ್ಲ. ಆ ಸಮಯದಲ್ಲಿ ನಾನು ಪೋಲೀಸರು ಮತ್ತು ಇಬ್ಬರು ವ್ಯಕ್ತಿಗಳು ಇದ್ದರು. ಆಗ ಸಮಯ 04-00 ಗಂಟೆ ಆಗಿತ್ತು. ಭಾವ ಚಿತ್ರದಲ್ಲಿ ನಾನು ಇದ್ದು, ಸದರಿ ಭಾವ ಚಿತ್ರವನ್ನು ಪಂಚನಾಮೆಯ ಕಾಲಕ್ಕೆ ತೆಗೆದಿರುತ್ತಾರೆ. ಭಾವ ಚಿತ್ರವನ್ನು ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದೆ.

( ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿದಂತೆ ನೀಡಲಾಯಿತು).

ಪಾಟೀ ಸವಾಲು: ಮಾನ್ಯ ಸಸಅ ರವರಿಂದ

2. ಪಂಚನಾಮೆಯನ್ನು ದಿಃ 24/05/2024 ರಂದು ಮಃ 04-30 ರಿಂದ 05-40 ರ ವರೆಗೆ ಚಾಸಾ 1 ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ 2 ರ ಸಮಕ್ಷಮದಲ್ಲಿ ನಿಪಿ. 2 ರಂತೆ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿ.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಮ್ ಬಿ ಬಿ ವಕೀಲರಿಂದ ಃ

3. ಪೋಲೀಸರು ಸಹಿ ಮಾಡು ಎಂದು ಹೇಳಿದ ಕಾರಣ ನಿಪಿ. 2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಭಾವ ಚಿತ್ರದಲ್ಲಿ ನಿಲ್ಲು ಎಂದು ಹೇಳಿದ್ದರಿಂದ ನಿಂತಿರುತ್ತೇನೆ ಎಂದರೆ ಸರಿ.

ಪೋಲೀಸರು ಪಂಚರಾಗುವಂತೆ ನೋಟೀಸ ಕೊಟ್ಟಿಲ್ಲ ಎಂದರೆ ಸರಿ. ಪಂಚನಾಮೆ ಬರೆಯಲು ಪೋಲೀಸರಿಗೆ ನಾನು ಮತ್ತು ಚಾಸಾ 2 ಮಾಹಿತಿ ಕೊಟ್ಟಿಲ್ಲ ಎಂದರೆ ಸರಿ.

<u>ಮರು ವಿಚಾರಣೆ ಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.